# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1811/2016/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 22/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ.ಮಗಲಾಯಿ ಭೋವಿ ತಿಮ್ಮಪ್ಪ ಬಿನ್ ಸಣ್ಣ ದುರುಗಪ್ಪ, ಭಾರತಿ ಕಾಲೋನಿ, 15ನೇ ಕ್ರಾಸ್, 15ನೇ ವಾರ್ಡ್, ದಾವಣಗೆರೆ ಟೌನ್, ದಾವಣಗೆರೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ, (2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ಮತ್ತು (3) ಶ್ರೀ.ಬಿ.ಮೊಹಮ್ಮದ್ ಷರೀಫ್, ಕಾರ್ಯದರ್ಶಿ, ಚಟ್ನಹಳ್ಳಿ ಗ್ರಾಮಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮಪಂಚಾಯಿತಿಯ ಕುರೆಮಾಗನಹಳ್ಳಿ ಗ್ರಾಮಪಂಚಾಯತಿಗೆ ಸೇರಿದ ಡೋರ್ ನಂ.40 ರ ಖಾಲಿ ನಿವೇಶನದ ಖಾತೆಯು ದೂರುದಾರರ ತಂದೆಯವರಾದ ಲೇಟ್.ಸಣ್ಣದುರುಗಪ್ಪ ಅವರ ಹೆಸರಿನಲ್ಲಿತ್ತು. ಮೂಲ ಖಾತೆದಾರರಿಗೆ ಗೊತ್ತಿಲ್ಲದಂತೆ ಅಧಿಕಾರ ದುರುಪಯೋಗ, ಭ್ರಷ್ಟಾಚಾರ ಮತ್ತು ಲಂಚಗುಳಿತನದಿಂದ ಬೇರೆಯವರ ಹೆಸರಿಗೆ ಎದುರುದಾರರು ಖಾತಾ ಬದಲಾವಣೆ ಮಾಡಿರುತ್ತಾರೆ. ಈ ಸಂಬಂಧ ಪಿ.ಡಿ.ಓ ರವರಿಗೆ ಕೇಳಲಾಗಿ ಉಡಾಫೆಯಿಂದ ವರ್ತಿಸುತ್ತಿದ್ದು, ಯಾವುದೇ ಕ್ರಮ ಕೈಗೊಳ್ಳದೆ ತಟಸ್ಥರಾಗಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಹರಪನಹಳ್ಳಿ ತಾಲ್ಲೂಕು, ಚಟ್ನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕುರೆಮಾಗನಹಳ್ಳಿ ಗ್ರಾಮದ ಶ್ರೀ.ಮೋಗಲಾಯ್ ಸಣ್ಣ ದುರುಗಪ್ಪ ಎಂದು 2013-14ನೇ ಸಾಲಿನ ಕರ ಆಕರಣೆ ರಿಜಿಸ್ಟರ್‌ನಲ್ಲಿ ಖಾತೆ ಇದ್ದು, ಸುಮಾರು ವರ್ಷಗಳಿಂದ ತನ್ನ ಸ್ವಾಧೀನಾನುಭವದಲ್ಲಿ ಮನೆ ಆಸ್ತಿ ಸಂ.40,

ಖಾನೇಷುಮಾರಿ 40 ಇದ್ದು, ಇದರ ಅಳತೆ ಪೂ.ಪ.8.8 ಮೀಟರ್, ಉ.ದ, 4.80 ಮೀಟರ್‌ವುಳ್ಳ ಖಾಲಿ ಜಾಗಕ್ಕೆ ಚೆಕ್ಕುಬಂದಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಸಂದು, ಉತ್ತರಕ್ಕೆ ಸಿದ್ದಪ್ಪನ ಮನೆ, ದಕ್ಷಿಣಕ್ಕೆ ದ್ಯಾಮಪ್ಪನ ಮನೆ ಈ ಮಧ್ಯೆ ಇರುವಂತಹ ಸದರಿ ವಾರಸುದಾರರ ಅನುಮತಿಯಿಲ್ಲದೆ ಅಥವಾ ಕ್ರಯಪತ್ರವಿಲ್ಲದೆ ಸದರಿ ಗ್ರಾಮದ ಶ್ರೀಮತಿ.ಗೀತಮ್ಮ ಕೋಂ ರುದ್ರೇಶ್ ಎಂಬುವರ ಹೆಸರಿಗೆ ದಿ.23/1/15 ರಂದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಚಟ್ನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಕುರೆಮಾಗನಹಳ್ಳಿ ಗ್ರಾಮದವರಿಗೆ ರೂ.100/- ಛಾಪಾ ಕಾಗದದ ಮೂಲಕ ಕರಾರು ಪತ್ರ ಮಾಡಿಕೊಂಡಿರುತ್ತಾರೆ. ಚಟ್ನಹಳ್ಳಿ ಗ್ರಾಮಪಂಚಾಯಿತಿಯ ಕಾರ್ಯಾಲಯದಲ್ಲಿ ಕಾರ್ಯದರ್ಶಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಾಮಾನ್ಯ ಸಭೆಯಲ್ಲಿ ಚರ್ಚಿಸದೆ ತಿದ್ದುಪಡಿ ಮಾಡಿದ ಬಗ್ಗೆ ಯಾವ ಅಧಿಕಾರಿಗಳು ಎಲ್ಲಿಯೂ ನಮೂದಿಸಿಲ್ಲ. ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಚಾರಿಸಿದಾಗ, ಖಾತೆ ತಿದ್ದುಪಡಿ ಮಾಡಿದ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಶ್ರೀಮತಿ.ಗೀತಮ್ಮ ಕೋಂ ರುದ್ರೇಶ್ ಎಂಬುವರ ಹೆಸರಿಗೆ ಡಿಮಾಂಡ್‌ನಲ್ಲಿ ತಿದ್ದುಪಡಿಯಾಗಿದೆ. ಆದರೆ ಮೂಲ ಖಾತೆದಾರರ ಹೆಸರು ಪಂಚತಂತ್ರ ತಂತ್ರಾಂಶದಲ್ಲಿ ಆಸ್ತಿ ಸಂ.40 ಮಗಲಾಯಿ ತಂದೆ ಸಣ್ಣ ದುರುಗಪ್ಪ ಎಂದು ಇರುತ್ತದೆ. ಸದರಿ ಖಾತೆಯನ್ನು ಡಿಮಾಂಡ್ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಮಾಡಿದ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿರುವುದಿಲ್ಲ. ಗ್ರಾಮಪಂಚಾಯಿತಿ ಕಾರ್ಯಾಲಯದಲ್ಲಿ ಖಾತೆಯನ್ನು ಬದಲಾವಣೆ ಮಾಡಿರುವುದಕ್ಕೆ ಅಧಿಕೃತವಾಗಿ ಯಾವ ಅಧಿಕಾರಿಯೂ ಸಹಿ ಮಾಡಿರುವುದಿಲ್ಲ ಹಾಗೂ ಆ ವಿಚಾರವನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿರುವುದಿಲ್ಲವೆಂದು ಹೇಳಿರುತ್ತಾರೆ.

4. 2ನೇ ಎದುರುದಾರರು ದೂರು ಅರ್ಜಿಯಲ್ಲಿನ ವಿಷಯದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮಪಂಚಾಯಿತಿ, ಚಟ್ನಹಳ್ಳಿ ಇವರಿಗೆ ನೀಡಿರುವ ಸೂಚನಾ ಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಆದ್ದರಿಂದ, ದೂರುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳ ಸಮೇತ ಗೌರವಾನ್ವಿತರ ಮುಂದೆ ಹಾಜರಾಗುವಂತೆ ದೂರುದಾರರಿಗೆ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಟ್ನಹಳ್ಳಿ ಗ್ರಾಮಪಂಚಾಯತ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರಿಗೆ ಆದೇಶಿಸಲಾಗಿತ್ತು.

5. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಟ್ನಹಳ್ಳಿ ಗ್ರಾಮ ಪಂಚಾಯಿತಿ, ಹರಪನಹಳ್ಳಿ ಇವರು ಹಾಜರಾಗಿ ಮೂಲ ಹೌಸ್‌ಲಿಸ್ಟ್ ಪುಸ್ತಕವನ್ನು ಹಾಜರು ಪಡಿಸಿದ್ದು, ಸದರಿ ರಿಜಿಸ್ಟರ್‌ನ್ನು ಪರಿಶೀಲಿಸಿದಾಗ ಆಸ್ತಿ ನಂ.40 ಮಗಲಾಯಿ ಸಣ್ಣ ದುರುಗಪ್ಪ ಎನ್ನುವವರ ಹೆಸರಿನಲ್ಲಿದ್ದು, ಸದರಿ ಹೆಸರನ್ನು ಕೆಂಪು ಷಾಹಿಯಲ್ಲಿ ರೌಂಡ್ ಮಾರ್ಕ್ ಮಾಡಿ ಅದರ ಪಕ್ಕದಲ್ಲಿ ಗೀತಮ್ಮ ಕೋಂ ರುದ್ರೇಶ ಎಂದು ನಮೂದು ಮಾಡಿರುವುದು ಕಂಡುಬರುತ್ತಿದ್ದು, ಆದರೆ, ಸದರಿ ತಿದ್ದುಪಡಿಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಗಳ ಸಹಿ ಕಂಡುಬರುತ್ತಿಲ್ಲ. ಸದರಿ ಅಂಶವನ್ನು ಗಮನಿಸಿದಾಗ, ಯಾವುದೇ ದಾಖಲಾತಿಗಳು ಇಲ್ಲದೆ ಪಂಚಾಯತ್ ಸಭೆಯಲ್ಲಿ ಠರಾವು ಆಗದ ಮಗಲಾಯಿ ಸಣ್ಣ ದುರುಗಪ್ಪರವರ ಹೆಸರಿನಲ್ಲಿರುವ ಖಾತೆಯನ್ನು ಬದಲಾವಣೆ ಮಾಡಲು ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರನ್ನು ವಿಚಾರಿಸಲಾಗಿ ಹೌಸ್‌ಲಿಸ್ಟ್ ಪುಸ್ತಕವು ಪಂಚಾಯತ್ ಕಾರ್ಯದರ್ಶಿ ಸುಪರ್ದಿಯಲ್ಲಿರುತ್ತದೆ. ಈ

ಪ್ರಕರಣದಲ್ಲಿ ಕಾರ್ಯದರ್ಶಿ, ಬಿ.ಮೊಹಮ್ಮದ್ ಷರೀಫ್ ಎನ್ನುವವರು ಖಾತಾ ಬದಲಾವಣೆ ಬಗ್ಗೆ ದಿ.3/8/15 ರಂದು ಹಿಂಬರಹ ನೀಡಿರುವುದು ಕಂಡುಬರುತ್ತದೆಯೆಂದು ಹೇಳಿಕೆ ನೀಡಿರುತ್ತಾರೆ.

6. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಜರು ಪಡಿಸಿರುವ ಹೌಸ್‌ಲಿಸ್ಟ್ ವಹಿಯ ಪ್ರತಿಯನ್ನು ಪರಿಶೀಲಿಸಿದಾಗ, ಆಸ್ತಿ ಸಂ.40 ಕ್ಕೆ ಸಂಬಂಧಪಟ್ಟಂತೆ ಮಗಲಾಯಿ ಸಣ್ಣದುರುಗಪ್ಪ ಎನ್ನುವವರ ಹೆಸರನ್ನು ರೌಂಡ್ ಮಾಡಿ ಪಕ್ಕದಲ್ಲಿ ಗೀತಮ್ಮ ಕೋಂ ರುದ್ರೇಶ್ ಎಂದು ಸೇರ್ಪಡೆ ಮಾಡಿರುವುದು ಕಂಡುಬರುತ್ತದೆ. ಸದರಿ ತಿದ್ದುಪಡಿಯ ಬಗ್ಗೆ ಅಧಿಕಾರಿಯ ಸಹಿಯಾಗಲೀ ಅಥವಾ ಯಾವ ಆದೇಶದ ಪ್ರಕಾರ ಸೇರ್ಪಡೆಗೊಳಿಸಲಾಗಿದೆಯೆನ್ನುವ ಬಗ್ಗೆ ನಮೂದು ಕಂಡುಬರುತ್ತಿಲ್ಲ. ಸದರಿ ಅಂಶವನ್ನು ಗಮನಿಸಿದಾಗ, ಮಗಲಾಯಿ ಸಣ್ಣದುರುಗಪ್ಪರವರ ಹೆಸರನ್ನು ತೆಗೆದು ಗೀತಮ್ಮ ಎನ್ನುವವರ ಹೆಸರನ್ನು ಅಕ್ರಮವಾಗಿ ಸೇರ್ಪಡೆಗೊಳಿಸಿರುವುದು ಕಂಡುಬರುತ್ತದೆ. ದೂರುದಾರರು ತನ್ನ ದೂರಿನ ಜೊತೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಚಟ್ನಹಳ್ಳಿ ಗ್ರಾಮಪಂಚಾಯಿತಿ ಕಾರ್ಯದರ್ಶಿಯಾದ ಮೊಹಮ್ಮದ್ ಷರೀಫ್ ಎನ್ನುವವರು ದಿ.3/8/15 ರಂದು ಒಂದು ಹಿಂಬರಹವನ್ನು ನೀಡಿರುವುದು ಕಂಡುಬರುತ್ತಿದ್ದು, ಸದರಿ ಹಿಂಬರಹದಲ್ಲಿ **"ಹರಪನಹಳ್ಳಿ ತಾಲ್ಲೂಕು, ಅರಸೀಕೇರಿ ಹೋಬಳಿ, ಚಟ್ನಹಳ್ಳಿ** ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಬರುವಂತಹ ಕುರೇಮಾಗನಹಳ್ಳಿ ಗ್ರಾಮದ ಡೋರ್ ನಂ.40 ರ ಖಾತೆ ಸಂ.ಮಗಲಾಯಿ ಸಣ್ಣದುರುಗಪ್ಪ ಇವರ ಹೆಸರಿಗೆ ಖಾತೆ ಇದ್ದು, ಆ ಖಾತೆಯನ್ನು ಬದಲಾವಣೆ ಮಾಡಲು ಗ್ರಾಮಸ್ಥರು ಹಾಗೂ ಗ್ರಾಮಪಂಚಾಯಿತಿ ಸದಸ್ಯರು ಸಹಿ ಮಾಡಿಕೊಟ್ಟಿರುತ್ತಾರೆ. ಮತ್ತು ಖಾಲಿ ನಿವೇಶನದ ಕ್ರಯದ ಕರಾರು, ಗ್ರಾಮಸ್ಥರ ಮಹಜರ್ ಮುಖಾಂತರ ಖಾತೆ ಬದಲಾವಣೆ ಮಾಡಲಾಗಿದೆ" ಎಂದು ಹಿಂಬರಹ ನೀಡಿರುವುದು ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ, ಯಾವುದೇ ನಿಯಮಗಳನ್ನು ಪಾಲಿಸದೆ ಅಕ್ರಮವಾಗಿ ಖಾತಾ ಬದಲಾವಣೆಗೆ ಕಾರ್ಯದರ್ಶಿಯಾದ ಬಿ.ಮೊಹಮ್ಮದ್ ಷರೀಫ್ ಪ್ರಯತ್ನಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಕ್ರಮವಾಗಿ ಮಾಡಿರುವ ತಿದ್ದುಪಡಿಯನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 2/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**